# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 21-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಪರ್ಯಾಯ ಖಾದ್ಯ ತೈಲದರಗಳ ವ್ಯತ್ಯಾಸ ಇಳಿಕೆಯಿಂದ ಪಾಮೆಣ್ಣೆ ಆಮದು ಇಳಿಕೆ

ಪಾಮೆಣ್ಣೆಯ ಪರ್ಯಾಯ ಖಾದ್ಯತೈಲ ದರಗಳ ವ್ಯತ್ಯಾಸ ಇಳಿಕೆಯಿಂದಾಗಿ ಭಾರತೀಯ ಆಮದುದಾರರು ಮೇ ತಿಂಗಳಿನ ಸುಮಾರು 75000 ಟನ್ ಪಾಮೆಣ್ಣೆ ಆಮದು ರದ್ದು ಪಡಿಸಿದ್ದಾರೆನ್ನಲಾಗಿದ್ದು, ಬದಲಿಯಾಗಿ ಸೂರ್ಯಕಾಂತಿ, ಸೋಯ ಎಣ್ಣೆ ಆಮದು ಮಾಡಲಿದ್ದಾರೆನ್ನಲಾಗಿದೆ. ವಾಶ್ ಔಟ್ ಎನ್ನುವ ವಿಧಾನದ ಮೂಲಕ(ಆಮದು ರದ್ದು ಪಡಿಸಿ ಬೇರೆಯವರಿಗೆ ಮಾರುವ ವಿಧಾನ) ಆಮದು ರದ್ದು ಪಡಿಸಲಾಗಿದೆಯೆನ್ನಲಾಗಿದೆ. ದರ ವ್ಯತಾಸ ಇಳಿಕೆಯಿಂದ ಮುಂದಿನ ತಿಂಗಳುಗಳಲ್ಲಿ ಪಾಮೆಣ್ಣೆ ಆಮದು ಇಳಿಕೆಯಾಗಿ, ಸೂರ್ಯಕಾಂತಿ ಹಾಗೂ ಸೋಯಾ ಎಣ್ಣೆಗಳು ಆಮದು ಹೆಚ್ಚಳವಾಗಲಿದೆಯೆನ್ನಲಾಗಿದೆ.

### ಹಿಂದಿನ 20 ವರ್ಷಗಳಲ್ಲೇ ಈ ವರ್ಷ ಗರಿಷ್ಠ ಮಟ್ಟದ ಜಾಗತಿಕ ಅಕ್ಕಿ ಕೊರತೆ

FITCH SOLUTIONS ಪ್ರಕಾರ 2023 ರಲ್ಲಿ ಹಿಂದಿನ 20 ವರ್ಷಗಳಲ್ಲೇ ಅತಿ ಗರಿಷ್ಠ ಜಾಗತಿಕ ಅಕ್ಕಿ ಕೊರತೆಯಾಗಲಿದೆಯೆನ್ನಲಾಗಿದೆ. ಇದರಿಂದ ಜಾಗತಿಕ ಅಕ್ಕಿ ದರ ಹೆಚ್ಚಳದಲ್ಲಿದ್ದು 2024 ರ ತನಕವೂ ದರ ಹೆಚ್ಚಳದಲ್ಲಿರಲಿದೆಯೆನ್ನಲಾಗಿದೆ. ಅಕ್ಕಿ ಕೊರತೆ ಪ್ರಮಾಣ 8.7 ಮಿಲಿಯನ್ ಟನ್‌ಗಳೆನ್ನಲಾಗಿದೆ.

### ಬೇಳೆಕಾಳು ದಾಸ್ತಾನು, ಪೂರೈಕೆ ಮತ್ತು ದರದ ಮೇಲೆ ಸರಕಾರ ನಿಗಾ

ಬೇಳೆಕಾಳು ದರ ನಿಯಂತ್ರಣದಲ್ಲಿಡಲು ಸರಕಾರ ಬೇಳೆಕಾಳು ದಾಸ್ತಾನು ಪೂರೈಕೆ ಹಾಗೂ ದರಗಳ ಮೇಲೆ ನಿರಂತರ ನಿಗಾ ವಹಿಸುತ್ತಿದೆಯೆನ್ನಲಾಗಿದೆ. ಉತ್ಪಾದನೆ ಇಳಿಕೆಯಾಗಿರುವುದರಿಂದ ತೊಗರಿ, ಉದ್ದು ಮುಂತಾದ ಬೇಳೆಕಾಳು ದರ ಹೆಚ್ಚಳವಾಗಿದೆ. ಕೆಲವು ಆಮದುದಾರರು ಪರಿಸ್ಥಿತಿಯ ಲಾಭ ಹೊಂದಲು ಮ್ಯಾನ್ಮಾರ್ ನಂತಹ ದೇಶಗಳಿಂದ ಆಮದು ಪ್ರಕ್ರಿಯೆ ಪೂರ್ಣಗೊಳಿಸುತ್ತಿಲ್ಲವೆಂಬ ಅನುಮಾನಗಳಿವೆಯೆನ್ನಲಾಗಿದೆ. ಇದರಿಂದ ದೇಶೀ ಮಾರುಕಟ್ಟೆಯಲ್ಲಿ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ.

### 1–20 ಮಲೇಶಿಯನ್ ಪಾಮೆಣ್ಣೆ ರಫ್ತು 20 ಶೇಕಡಾ ಇಳಿಕೆ

ಕಾರ್ಗೋ ಸರ್ವೆಯರ್ ಗಳ ಅಂದಾಜಿನಂತೆ 1–20 ಎಪ್ರಿಲ್ ಅವಧಿಯ ಮಲೇಶೀಯನ್ ಪಾಮೆಣ್ಣೆ ರಫ್ತು 20 ರಿಂದ 25 ಶೇಕಡಾ ಇಳಿಕೆಯಾಗಿದೆ. ಪ್ರತಿಸ್ಪರ್ಧಿ ಪರ್ಯಾಯ ಖಾದ್ಯತೈಲ ದರಗಳ ಇಳಿಕೆ, ಪಾಮೆಣ್ಣೆ ರಫ್ತು ಬೇಡಿಕೆ ಇಳಿಕೆಯಿಂದ ಹೆಚ್ಚಾಗಿದ್ದ ಪಾಮೆಣ್ಣೆ ರಫ್ತು ಮತ್ತೆ ಇಳಿಕೆಯಾಗಿದೆ. ಮುಂದಿನ 3 ತಿಂಗಳ ಅವಧಿಯಲ್ಲಿ ಭಾರತದ ಪಾಮೆಣ್ಣೆ ಆಮದು ಇಳಿಕೆಯಾಗಿ ಇತರ ಪರ್ಯಯ ಖಾದ್ಯತೈಲಗಳ ಆಮದು ಹೆಚ್ಚಳವಾಗಲಿದೆಯೆನ್ನಲಾಗಿದೆ.

### ದಾವಣಗೆರೆ ಆವಕ ಇಳಿಕೆಯಿಂದ ಜೋಳ ದರ ಹೆಚ್ಚಳ

ದಾವಣಗೆರೆಯಲ್ಲಿ ಜೋಳ ಆವಕ ಇಳಿಕೆಯಿಂದ ದರ ಕ್ವಿಂಟಾಲ್‌ಗೆ ರೂ. 50 ಹೆಚ್ಚಳವಾಗಿದೆಯೆನ್ನಲಾಗಿದೆ. 8000 ಚೀಲಗಳಿಂದ ಆವಕ 2000 ಚೀಲಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ.

### ಸರಕಾರಿ ಗೋಧಿ ಖರೀದಿ 12 ಶೇಕಡಾ ಹೆಚ್ಚಳ

ಎಪ್ರಿಲ್ 19 ರ ತನಕದ ಸರಕಾರಿ ಏಜೆನ್ಸಿಗಳ ಗೋಧಿ ಖರೀದಿ ಹಿಂದಿನ ವರ್ಷ ಇದೇ ಅವಧಿಗಿಂತ (9.98 ಮಿ.ಟನ್) 12 ಶೇಕಡಾ ಹೆಚ್ಚಳವಾಗಿ 11.14 ಮಿ.ಟನ್ ಗಳಾಗಿವೆಯೆನ್ನಲಾಗಿದೆ. ಮಧ್ಯಪ್ರದೇಶ, ಹರಿಯಾಣ ಹಾಗೂ ಉತ್ತರಪ್ರದೇಶಗಳಲ್ಲಿ ಖರೀದಿ ಹೆಚ್ಚಳಗೊಂಡ ಕಾರಣ ಒಟ್ಟು ಖರೀದಿ ಹಿಂದಿನ ವರ್ಷಕ್ಕಿಂತ ಹೆಚ್ಚಳವಾಗಿದೆಯೆನ್ನಲಾಗಿದೆ.

### ಜೀರಿಗೆ ದರ ಮತ್ತೆ ಹೆಚ್ಚಳ

ಉತ್ಪಾದನೆ ಇಳಿಕೆ, ಪೂರೈಕೆಗಿಂತ ಬೇಡಿಕೆ ಹೆಚ್ಚಳವಾದ ಪರಿಣಾಮ ಜೀರಿಗೆ ದರ ಮತ್ತೆ ಹೆಚ್ಚಳವಾಗಿ ಕ್ವಿ. ಗೆ ರೂ.41180ಕ್ಕೇರಿದೆಯೆನ್ನಲಾಗಿದೆ. ದರ ಹೆಚ್ಚಳದಲ್ಲಿರುವ ಸಾಧ್ಯತೆ ಅಧಿಕವಾಗಿದೆ.